# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 99 (39) |
| ವಿಧಾನ ಪರಿಷತ್ತಿನ ಸದಸ್ಯರ ಹೆಸರು | : | ಶ್ರೀ ರಾಮೋಜಿಗೌಡ (ಪದವೀಧರರ ಕ್ಷೇತ್ರ) |
| ಉತ್ತರಿಸುವವರು | : | ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು |
| ಉತ್ತರಿಸುವ ದಿನಾಂಕ | : | 27.01.2026 |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ | ರಾಜ್ಯದಲ್ಲಿ ಸಾಮೂಹಿಕ ಉದ್ಯೋಗ ಸೃಷ್ಟಿಸಲು ಮತ್ತು ಪ್ರಾದೇಶಿಕ ಅಸಮಾನತೆಯನ್ನು ಕಡಿಮೆ ಮಾಡಲು ಸರ್ಕಾರ ಕ್ರಿಯಾ ಯೋಜನೆಯನ್ನು ಸಿದ್ಧಪಡಿಸಿದೆಯೇ; | ರಾಜ್ಯದಲ್ಲಿ ಉದ್ಯೋಗ ಸೃಷ್ಟಿಸಲು ಮತ್ತು ಪ್ರಾದೇಶಿಕ ಅಸಮಾನತೆಯನ್ನು ಕಡಿಮೆ ಮಾಡಲು ಕೈಗಾರಿಕಾ ನೀತಿ – 2025-30 ನ್ನು ಹೊರತರಲಾಗಿದೆ. |
| ಆ | ರಫ್ತು ಸುಗಮಗೊಳಿಸುವಿಕೆಗಾಗಿ ಬೆಂಗಳೂರು ಮತ್ತು ಕರ್ನಾಟಕದ ಕರಾವಳಿ ಬಂದರುಗಳೊಂದಿಗೆ ಗ್ರಾಮೀಣ ಉತ್ಪಾದನಾ ಕೇಂದ್ರಗಳನ್ನು ಸಂಪರ್ಕಿಸಲು ಹೊಸ ಕೈಗಾರಿಕಾ ಕಾರಿಡಾರ್ ಗಳನ್ನು ಸ್ಥಾಪಿಸಲಾಗಿದೆಯೇ; | ರಫ್ತು, ಸುಗಮಗೊಳಿಸುವಿಕೆಗಾಗಿ ಬೆಂಗಳೂರು ಮತ್ತು ಕರ್ನಾಟಕದ ಕರಾವಳಿ ಬಂದರುಗಳೊಂದಿಗೆ ಗ್ರಾಮೀಣ ಉತ್ಪಾದನಾ ಕೇಂದ್ರಗಳನ್ನು ಸಂಪರ್ಕಿಸಲು ಹೊಸ ಕೈಗಾರಿಕಾ ಕಾರಿಡಾರ್‌ಗಳನ್ನು ಸ್ಥಾಪಿಸುವ ಯೋಜನೆ ರೂಪುಗೊಂಡಿರುವುದಿಲ್ಲ. |
| ಇ | ಎಲೆಕ್ಟ್ರಾನಿಕ್ಸ್, ಆಟೋ ಮತ್ತು ಚಿಪ್ ವಿನ್ಯಾಸ ಕೈಗಾರಿಕೆಗಳಂತಹ ಹೆಚ್ಚಿನ ಮೌಲ್ಯದ ಉತ್ಪಾದನಾ ವಲಯಗಳನ್ನು ಆಕರ್ಷಿಸಲು ಯಾವುದೇ ರೀತಿ ಪ್ರೋತ್ಸಾಹ ಅಥವಾ ಭೂ ಸಬ್ಸಿಡಿಗಳನ್ನು ನೀಡಲಾಗುತ್ತಿದೆಯೇ; | ESDM – 2020-25 ರ ನೀತಿಯಂತೆ ಎಲೆಕ್ಟ್ರಾನಿಕ್ಸ್ ಗೆ ಸಂಬಂಧಿಸಿದ ಕೈಗಾರಿಕೆಗಳಿಗೆ ರಿಯಾಯಿತಿ ಹಾಗೂ ಪ್ರೋತ್ಸಾಹಗಳನ್ನು ನೀಡಲಾಗುತ್ತಿದೆ.<br><br>ಆಟೋ ಕೈಗಾರಿಕೆಗಳಿಗೆ ಕೈಗಾರಿಕಾ ನೀತಿ – 2025-30 ರಡಿ ರಿಯಾಯಿತಿ ಹಾಗೂ ಪ್ರೋತ್ಸಾಹಗಳನ್ನು ನೀಡಲಾಗುತ್ತಿದೆ. |
| ಈ | ಇಲಾಖೆಯು ಪ್ರಮುಖ ಉತ್ಪಾದನಾ [redacted]ಸ್ಟರ್‌ಗಳಿಗೆ ನಿರ್ದಿಷ್ಟ ರಫ್ತು ಗುರಿಗಳನ್ನು ನಿಗದಿಪಡಿಸಿದೆಯೇ ಮತ್ತು ಜಾಗತಿಕ ಪೂರೈಕೆ ಸರಪಳಿಗಳೊಂದಿಗೆ ಸಂಯೋಜಿಸಲು ಕ್ರಮಗಳನ್ನು ತೆಗೆದುಕೊಂಡಿದೆಯೇ; | ಇಲಾಖೆಯು ಪ್ರಮುಖ ಉತ್ಪಾದನಾ ಕ್ಲಸ್ಟರ್‌ಗಳಿಗೆ ನಿರ್ದಿಷ್ಟ ರಫ್ತು ಗುರಿಗಳನ್ನು ನಿಗದಿಪಡಿಸಿರುವುದಿಲ್ಲ. ಜಾಗತಿಕ ಪೂರೈಕೆ ಸರಪಳಿಗಳೊಂದಿಗೆ ಸಂಯೋಜಿಸಲು ರಾಜ್ಯದ ಎಂ.ಎಸ್.ಎಂ.ಇ. ಗಳಿಗೆ ಜಾಗತಿಕ ಮಟ್ಟದ Expo ಗಳಲಿ ಭಾಗವಹಿಸುವ ರಾಜ್ಯದ MDA ಯೋಜನೆಯಡಿ ಸಹಾಯಧನವನ್ನು ನೀಡಲಾಗುತ್ತಿದೆ. |
| ಉ | ಕರ್ನಾಟಕದಾದ್ಯಂತ MSME ಗಳನ್ನು ಬಲಪಡಿಸಲು ಮತ್ತು ಸಣ್ಣ ಉತ್ಪಾದಕರಿಗೆ ಸುಲಭವಾದ ಸಾಲ ಪ್ರವೇಶ, ಮಾರುಕಟ್ಟೆ ಮತ್ತು ತಂತ್ರಜ್ಞಾನ ಅಳವಡಿಕೆಗೆ ಅನುಕೂಲವಾಗುವಂತೆ ಯಾವ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ? | MSME ಗಳಿಗೆ Credit Guarantee Scheme ನಡಿ ಸಾಲ ಸೌಲಭ್ಯ ಪಡೆಯಲು ಅವಕಾಶವಿರುತ್ತದೆ.<br><br>ಮಾರುಕಟ್ಟೆ ಸಂಬಂಧ MDA ಮತ್ತು ತಂತ್ರಜ್ಞಾನ ಅಳವಡಿಕೆಗೆ Credit Linked Subsidy for Technology Upgradation Scheme ಗಳು ಲಭ್ಯವಿರುತ್ತವೆ. |

**ಕಡತ ಸಂಖ್ಯೆ ಸಿಐ 26 ಎಸ್‌ಪಿಐ 2026**

**(ಎಂ.ಬಿ. ಪಾಟೀಲ)**
ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ
ಮೂಲಸೌಲಭ್ಯ ಅಭಿವೃದ್ಧಿ ಸಚಿವರು